1993-94 : 23

1994-95 : 19

ಶ್ರೀ ಎಸ್.ಆರ್. ಲಕ್ಷ್ಮಯ್ಯ : ನಾನು ಕೇಳಿರತಕ್ಕಂತಹ ಪ್ರಶ್ನೆಗೆ ಬೇಕಾದಂಥ ಮಾಹಿತಿ ಕೊಟ್ಟಿಲ್ಲ, ಕೊಟ್ಟಿರತಕ್ಕಂಥ ಉತ್ತರ ತಪ್ಪಾಗಿದೆ. ನಾನು ಬೀರೂರು ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕೇಳಿದ್ದೇನೆ. ಅವರು ರಾಜ್ಯಕ್ಕೆ ಸಂಬಂಧಪಟ್ಟಂಥೆ ಉತ್ತರ ಕೊಟ್ಟಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, ಅವರು ಪ್ರಶ್ನೆ ಕೇಳುವಾಗ 86-87, 87-88, 88-89ನೇ ಸಾಲಿನಲ್ಲಿ ಕೊರೆಸ್ಲಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಾರೆ. ಶ್ರೀ ಲಕ್ಷ್ಮಯ್ಯ ಶಾಸಕರಾಗಿದ್ದಂತಹ ಸಮಯದಲ್ಲಿ ಬೀರೂರು ಕ್ಷೇತ್ರಕ್ಕೆ 86-87ರಲ್ಲ 53 ಕೊಳವೆ ಬಾವಿಗಳು, 87-88ರಲ್ಲಿ 14 ಕೊಳವೆ ಬಾವಿಗಳು, 88-89ರಲ್ಲಿ 10 ಕೊಳವೆ ಬಾವಿಗಳು ಕೊರೆಯಲ್ಪಟ್ಟಿವೆ. ಅದೇ ರೀತಿ ಕಳೆದ ಮೂರು ವರ್ಷಗಳಲ್ಲಿ ಬೀರೂರು ಕ್ಷೇತ್ರಕ್ಕೆ 92-93ರಲ್ಲಿ 18, 93-94ರಲ್ಲಿ 23 ಮತ್ತು 94-95ನೇ ಸಾಲಿಗೆ 19 ಈ ರೀತಿ ಅವರ ಕಾಲದಲ್ಲಿ ಹೆಚ್ಚು ಕೊಳವೆ ಬಾವಿಗಳನ್ನು ಕೊರೆಯಲ್ಪಟ್ಟಿವೆ.

ಅಧ್ಯಕ್ಷರು : ಶ್ರೀ ವಡ್ಡರ್‌ರವರೇ, ತಮ್ಮ ಚುಕ್ಕೆ ಪ್ರಶ್ನೆ ಸಂಖ್ಯೆ : 879ಯನ್ನು ಅನಂತರ ತೆಗೆದುಕೊಳ್ಳುತ್ತೇನೆ.

ಮೈಸೂರು ನಗರದಲ್ಲಿ ವಿದ್ಯುಚ್ಛಕ್ತಿಯ ಅಭಾವ

847 - ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ವಿದ್ಯುಚ್ಛಕ್ತಿ ಅಭಾವವಿರುವುದು ನಿಜವೇ? ಹಾಗಿದ್ದಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗಿರುವುದು ನಿಜವೇ?

ಆ) ಮೈಸೂರಿನ ವಿವಿಧ ಬಡಾವಣೆಗಳಲ್ಲಿ ವೋಲ್ಟೇಜ್ ಸಮಸ್ಯೆ ಇದ್ದು, ಇದಕ್ಕೆ ಕಾರಣ ಟ್ರಾನ್ಸ್‌ಫಾರ್ಮರ್‌ಗಳ ಕೊರತೆ ಎಂಬುದು ನಿಜವೇ?

ಇ) ಹಾಗಿದ್ದಲ್ಲಿ ಈ ವಿಷಯಗಳ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಹೌದು

ಆ) ಮೈಸೂರಿನ ವಿವಿಧ ಬಡಾವಣೆಗಳಲ್ಲಿ ವೋಲ್ಟೇಜ್ ಸಮಸ್ಯೆಗೆ ಕಾರಣ ಇಡೀ ವಿದ್ಯುತ್ ವ್ಯವಸ್ಥೆಯಲ್ಲೇ ಕಡಿಮೆ ವೋಲ್ಟೇಜ್ ಪರಿಸ್ಥಿತಿ ಉಂಟಾಗಿರುವುದು.

ಇ) ಮೈಸೂರಿನ ಹೂಟಗಳ್ಳಿಯಲ್ಲಿರುವ 220 ಕೆವಿ ವಿದ್ಯುತ್ ಸ್ವೀಕರಣಾ ಕೇಂದ್ರದಲ್ಲಿ ಓವರ್‌ಲೋಡ್ ಆಗುವಿಕೆಯನ್ನು ತಪ್ಪಿಸಲು ಮಂಡ್ಯ ಜಿಲ್ಲೆಯ ಹೆಚ್ಚಿನ ಪ್ರದೇಶಗಳಿಗೆ ಟಿ.ಕೆ. ಹಳ್ಳಿಯಲ್ಲಿರುವ 220 ಕೆವಿ ವಿದ್ಯುತ್ ಸ್ವೀಕರಣಾ ಕೇಂದ್ರದಿಂದ ವಿದ್ಯುತ್ ಸರಬರಾಜು ಮಾಡಲು ಟಿ.ಕೆ. ಹಳ್ಳಿಯಿಂದ ಮಂಡ್ಯಕ್ಕೆ 66 ಕೆವಿ ಡಬಲ್ ಸರ್ಕ್ಯೂಟ್ ವಿದ್ಯುತ್ ಪ್ರಸರಣಾ ಮಾರ್ಗವನ್ನು ನಿರ್ಮಾಣ ಮಾಡಲಾಗುತ್ತಿದೆ. ನಿರ್ಮಾಣ ಕಾರ್ಯವು ಪೂರ್ಣಗೊಂಡ ನಂತರ ಮಂಡ್ಯ ಜಿಲ್ಲೆಯ ಹೆಚ್ಚಿನ ಪ್ರದೇಶಗಳಿಗೆ ಮೈಸೂರಿನ ಹೂಟಗಳ್ಳಿಯ 220ಕೆವಿ ವಿದ್ಯುತ್ ಸ್ವೀಕರಣಾ ಕೇಂದ್ರದಿಂದ ವಿದ್ಯುತ್ ಸರಬರಾಜಾಗುವುದನ್ನು ತಪ್ಪಿಸಿ, ಟಿ.ಕೆ. ಹಳ್ಳಿಯ 220 ಕೆವಿ ವಿದ್ಯುತ್ ಸ್ವೀಕರಣಾ ಕೇಂದ್ರದಿಂದ ವಿದ್ಯುತ್ ಸರಬರಾಜನ್ನು ವ್ಯವಸ್ಥೆ ಮಾಡಲಾಗುವುದು. ಇದರಿಂದಾಗಿ ಮೈಸೂರಿನ ಹೂಟಗಳ್ಳಿಯ ವಿದ್ಯುತ್ ಸ್ವೀಕರಣಾ ಕೇಂದ್ರದಲ್ಲಿ ಲೋಡ್ ಬಹಳಷ್ಟು ಪ್ರಮಾಣದಲ್ಲಿ ಕಡಿಮೆಗೊಂಡು ಮೈಸೂರು ನಗರದಲ್ಲಿ ವಿದ್ಯುತ್ ಸರಬರಾಜಿನಲ್ಲಿ ಸುಧಾರಣೆ ಉಂಟಾಗುವುದು. ಟಿ.ಕೆ.

ಹಳ್ಳಿ ಮಂಡ್ಯ ನಡುವಿನ 66 ಕೆವಿ ಡಬಲ್ ಸರ್ಕ್ಯೂಟ್ ವಿದ್ಯುತ್ ಪ್ರಸರಣಾ ಮಾರ್ಗದ ನಿರ್ಮಾಣ ಕಾರ್ಯವು ತೀವ್ರ ಪ್ರಗತಿಯಲ್ಲಿದ್ದು, ಮೇ 95ರ ಅಂತ್ಯದೊಳಗೆ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲು ಉದ್ದೇಶಿಸಿದೆ.

ಅಲ್ಲದೇ ಮೈಸೂರು ನಗರದಲ್ಲಿ ವಿದ್ಯುತ್ ಸರಬರಾಜಿನ ಸುಧಾರಣೆಗಾಗಿ 'ಮೈಸೂರು ಅರ್ಬನ್ ಡಿಸ್ಟ್ರಿಬ್ಯೂಷನ್ ಇಂಪ್ರೂಮೆಂಟ್ ಸ್ಕೀಂ'ನ ಅಡಿಯಲ್ಲಿ ದೊಡ್ಡಕೆರೆ ಮೈದಾನದಲ್ಲಿ ಒಂದು 66:11 ಕೆವಿ ವಿದ್ಯುತ್ ಉಪಕೇಂದ್ರದ ಸ್ಥಾಪನೆ, ಮೇಟಗಳ್ಳಿ, ಎಫ್‌ಟಿಎಸ್, ರಾಮಕೃಷ್ಣನಗರ, ಮೈಸೂರು ಸೌತ್, ಹೂಟಗಳ್ಳಿ (110:11 ಕೆವಿ)ಗಳಲ್ಲಿರುವ ವಿದ್ಯುತ್ ಬಸ್ ಸ್ಟೇಷನ್‌ಗಳ ಸಾಮರ್ಥ್ಯವನ್ನು ಹೆಚ್ಚಳಗೊಳಿಸುವುದು, 4.6 ಕೆವಿ ವಿದ್ಯುತ್ ವಿತರಣಾ ವ್ಯವಸ್ಥೆಯನ್ನು 11 ಕೆವಿಗೆ ಪರಿವರ್ತಿಸುವುದು, ಹೆಚ್ಚುವರಿ 11 ಕೆವಿ ಮಾರ್ಗಗಳ ನಿರ್ಮಾಣ ಮತ್ತು ಹೊಸ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ಕೇಂದ್ರಗಳ ಸ್ಥಾಪನೆ ಇತ್ಯಾದಿ ಕಾರ್ಯಗಳನ್ನು ನಿರ್ವಹಿಸಲು ಉದ್ದೇಶಿಸಿದೆ. ಈ ಕಾರ್ಯಗಳಿಗಾಗಿ ಎಷಿಯನ್ ಅಭಿವೃದ್ಧಿ ಬ್ಯಾಂಕ್‌ನಿಂದ ಆರ್ಥಿಕ ನೆರವನ್ನು ಪಡೆಯಲಾಗುತ್ತಿದೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಉಪ ಮುಖ್ಯಮಂತ್ರಿಗಳು ನಾಜೂಕಾಗಿ ಹೌದಪ್ಪನ ಚಾವಡಿಯಲ್ಲಿ ಹೌದಪ್ಪ, ಇಲ್ಲಪ್ಪನ ಚಾವಡಿಯಲ್ಲಿ ಇಲ್ಲಪ್ಪ ಎನ್ನುವ ರೀತಿಯಲ್ಲಿ ಉತ್ತರ ಕೊಟ್ಟಿದ್ದಾರೆ.

ಅಧ್ಯಕ್ಷರು : ಭಾಷಣ ಇಲ್ಲ, ಉಪ ಪ್ರಶ್ನೆ ಇದ್ದಾರೆ ಕೇಳಿ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಹೌದಪ್ಪನ ಚಾವಡಿಯಲ್ಲಿ ಹೌದಪ್ಪ, ಇಲ್ಲಪ್ಪನ ಚಾವಡಿಯಲ್ಲಿ ಇಲ್ಲಪ್ಪ ಎನ್ನುವ ರೀತಿಯಲ್ಲಿ ಉತ್ತರ ಇದೆ ಏಕೆಂದರೆ, ಮೈಸೂರು ನಗರ ಶೈಕ್ಷಣಿಕ ನಗರವಾಗಿದ್ದು ಅಲ್ಲಿರತಕ್ಕ ಸಾವಿರಾರು ವಿದ್ಯಾರ್ಥಿಗಳಿಗೆ ವಿದ್ಯುತ್‌ನಿಂದ ತೊಂದರೆ ಆಗುತ್ತಾ ಇರತಕ್ಕಂಥದ್ದನ್ನು ಅರ್ಥೈಸಿಕೊಂಡು ಅರ್ಥ ಮಾಡಿಕೊಂಡು ಹೇಳುತ್ತಾ ಇದ್ದೇನೆ. ಅದಕ್ಕೆ ಉಪ ಮುಖ್ಯಮಂತ್ರಿಗಳು 'ಹೌದು' ಎಂದು ಉತ್ತರ ಕೊಟ್ಟಿದ್ದಾರೆ. ಆದುದರಿಂದ ಈ ಹೌದು ಅನ್ನುವ ಪದದಲ್ಲಿ ತೊಂದರೆ ಇದೆ ಎಂದು ಅರ್ಥವಾಯಿತು. ಆದರೆ ಅದಕ್ಕೆ ಪರಿಹಾರವನ್ನು ಹೇಳಿದ್ದಾರೆ. ಆದರೆ ಪರಿಹಾರ ಯಾವಾಗ ಆಗುತ್ತದೆ?

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಮೈಸೂರು ನಗರದಲ್ಲಿ ವಿದ್ಯುಚ್ಛಕ್ತಿ ಅಭಾವ ಇರುವುದರಿಂದ ವಿದ್ಯಾರ್ಥಿಗಳಿಗೆ, ಸಾರ್ವಜನಿಕರಿಗೆ ತೊಂದರೆಯಾಗಿರುವುದು ನಿಜ.

ಮೈಸೂರಿನ ವಿವಿಧ ಬಡಾವಣೆಗಳಲ್ಲಿ ವೋಲ್ಟೇಜ್ ಸಮಸ್ಯೆಗೆ ಕಾರಣ ಇಡೀ ವಿದ್ಯುತ್ ವ್ಯವಸ್ಥೆಯಲ್ಲೇ ಕಡಿಮೆ ವೋಲ್ಟೇಜ್ ಪರಿಸ್ಥಿತಿ ಉಂಟಾಗಿರುವುದು.

ಮೈಸೂರಿನ ಹೂಟಗಳ್ಳಿಯಲ್ಲಿರುವ 220 ಕೆವಿ ವಿದ್ಯುತ್ ಸ್ವೀಕರಣಾ ಕೇಂದ್ರದಲ್ಲಿ ಓವರ್‌ಲೋಡ್ ಆಗುವಿಕೆಯನ್ನು ತಪ್ಪಿಸಲು ಮಂಡ್ಯ ಜಿಲ್ಲೆಯ ಹೆಚ್ಚಿನ ಪ್ರದೇಶಗಳಿಗೆ ಟಿ.ಕೆ. ಹಳ್ಳಿಯಿಂದ ಮಂಡ್ಯಕ್ಕೆ 66 ಕೆ.ವಿ ಡಬಲ್ ಸರ್ಕ್ಯೂಟ್ ವಿದ್ಯುತ್ ಪ್ರಸರಣಾ ಮಾರ್ಗವನ್ನು ನಿರ್ಮಾಣ ಮಾಡಲಾಗುತ್ತಿದೆ. ನಿರ್ಮಾಣ ಕಾರ್ಯವು ಪೂರ್ಣಗೊಂಡ ನಂತರ ಮಂಡ್ಯ ಜಿಲ್ಲೆಯ ಹೆಚ್ಚಿನ ಪ್ರದೇಶಗಳಿಗೆ ಮೈಸೂರಿನ ಹೂಟಗಳ್ಳಿಯ 220 ಕೆವಿ ವಿದ್ಯುತ್ ಸ್ವೀಕರಣಾ ಕೇಂದ್ರದಿಂದ ವಿದ್ಯುತ್ ಸರಬರಾಜುಗುವುದನ್ನು ತಪ್ಪಿಸಿ, ಟಿ.ಕೆ. ಹಳ್ಳಿಯ 220 ಕೆವಿ ವಿದ್ಯುತ್ ಸ್ವೀಕರಣಾ ಕೇಂದ್ರದಿಂದ ವಿದ್ಯುತ್ ಸರಬರಾಜನ್ನು ವ್ಯವಸ್ಥೆ ಮಾಡಲಾಗುವುದು. ಇದರಿಂದಾಗಿ ಮೈಸೂರಿನ ಹೂಟಗಳ್ಳಿಯ ವಿದ್ಯುತ್ ಸ್ವೀಕರಣಾ ಕೇಂದ್ರದಲ್ಲಿ ಲೋಡ್ ಬಹಳಷ್ಟು ಪ್ರಮಾಣದಲ್ಲಿ ಕಡಿಮೆಗೊಂಡು ಮೈಸೂರು ನಗರದಲ್ಲಿ ವಿದ್ಯುತ್ ಸರಬರಾಜಿನಲ್ಲಿ ಸುಧಾರಣೆ ಉಂಟಾಗುವುದು. ಟಿ.ಕೆ. ಹಳ್ಳಿ

ಮತ್ತು ಮಂಡ್ಯ ನಡುವಿನ 66 ಕೆವಿ ಡಬಲ್ ಸರ್ಕ್ಯೂಟ್ ವಿದ್ಯುತ್ ಪ್ರಸರಣಾ ಮಾರ್ಗದ ನಿರ್ಮಾಣ ಕಾರ್ಯವು ತೀವ್ರ ಪ್ರಗತಿಯಲ್ಲಿದ್ದು, ಮೇ 1995ರ ಅಂತ್ಯದೊಳಗೆ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲು ಉದ್ದೇಶಿಸಿದೆ.

ಅಲ್ಲದೇ ಮೈಸೂರು ನಗರದಲ್ಲಿ ವಿದ್ಯುತ್ ಸರಬರಾಜಿನ ಸುಧಾರಣೆಗಾಗಿ ಮೈಸೂರು ಅರ್ಬನ್ ಡಿಸ್ಟ್ರಿಬ್ಯೂಷನ್ ಇಂಪ್ರೂಮೆಂಟ್ ಸ್ಕೀಂನ ಅಡಿಯಲ್ಲಿ ದೊಡ್ಡಕೆರೆ ಮೈದಾನದಲ್ಲಿ ಒಂದು 66:11 ಕೆವಿ ವಿದ್ಯುತ್ ಉಪಕೇಂದ್ರದ ಸ್ಥಾಪನೆ, ಮೇಟಗಳ್ಳಿ, ಎಫ್‌ಟಿಎಸ್, ರಾಮಕೃಷ್ಣನಗರ, ಮೈಸೂರು ಸೌತ್, ಹೂಟಗಳ್ಳಿ (11:11 ಕೆವಿ)ಗಳಲ್ಲಿರುವ ವಿದ್ಯುತ್ ಬಸ್ ಸ್ಟೇಷನ್‌ಗಳ ಸಾಮರ್ಥ್ಯವನ್ನು ಹೆಚ್ಚಳಗೊಳಿಸುವುದು, 4.6 ಕೆವಿ ವಿದ್ಯುತ್ ವಿತರಣಾ ವ್ಯವಸ್ಥೆಯನ್ನು 11 ಕೆವಿಗೆ ಪರಿವರ್ತಿಸುವುದು, ಹೆಚ್ಚುವರಿ 11 ಕೆವಿ ಮಾರ್ಗಗಳ ನಿರ್ಮಾಣ ಮತ್ತು ಹೊಸ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ಕೇಂದ್ರಗಳ ಸ್ಥಾಪನೆ ಇತ್ಯಾದಿ ಕಾರ್ಯಗಳನ್ನು ನಿರ್ವಹಿಸಲು ಉದ್ದೇಶಿಸಿದೆ. ಈ ಕಾರ್ಯಗಳಿಗಾಗಿ ವಿಷಿಯನ್ ಅಭಿವೃದ್ಧಿ ಬ್ಯಾಂಕ್‌ನಿಂದ ಆರ್ಥಿಕ ನೆರವನ್ನು ಪಡೆಯಲಾಗುತ್ತಿದೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ವಿಷಿಯನ್ ಬ್ಯಾಂಕ್‌ನಿಂದ ಯಾವತ್ತು ನೆರವು ಪಡೆದುಕೊಳ್ಳುತ್ತೀರಿ? ಯಾವತ್ತೂ ನಮ್ಮ ಕರ್ನಾಟಕದ್ದು ಕಾಡಿ ಬೇಡಿ ಪಡೆಯುವುದೇ ಆಯಿತು. ವಿಷಿಯನ್ ಅಭಿವೃದ್ಧಿ ಬ್ಯಾಂಕ್‌ನಿಂದ ಸಾಲ ತರುವುದು ಏನೂ ಬೇಡ. ಇರತಕ್ಕ ಸಂಪನ್ಮೂಲದಿಂದಲೇ ಕೆಲಸ ಮಾಡುವುದಕ್ಕಾಗುವುದಿಲ್ಲವೇ?

(ಗೊಂದಲ)

ಅಧ್ಯಕ್ಷರು : ನಿಮ್ಮಂಥವರು ಬರಬೇಕು ಸುಧಾರಣೆ ಆಗಬೇಕು. ದಯಮಾಡಿ ಕುಳಿತುಕೊಳ್ಳಿ, ಜಾಸ್ತಿ ಮಾತನಾಡಿದರೆ ಮೈಕ್‌ನಲ್ಲಿ ವೋಲ್ಟೇಜ್ ಜಾಸ್ತಿ ಆಗುತ್ತದೆ, ದಯವಿಟ್ಟು ಕುಳಿತುಕೊಳ್ಳಿ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರವಾಸಿ ಕೇಂದ್ರಗಳ ಅಭಿವೃದ್ಧಿ

854 - ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಚಿಕ್ಕಮಗಳೂರು) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಪ್ರವಾಸಿ ಕೇಂದ್ರಗಳನ್ನು ಸರ್ಕಾರದವರು ಗುರುತಿಸಿದ್ದಾರೆ?

ಆ) ಈ ಪ್ರವಾಸಿ ಕೇಂದ್ರಗಳ ಅಭಿವೃದ್ಧಿಗಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮ ಏನು?

ಇ) ಇಲ್ಲಿಯವರೆಗೆ ಖರ್ಚಾಗಿರುವ ಹಣ ಎಷ್ಟು? ಮತ್ತು ಯಾವ ಯಾವ ಪ್ರವಾಸಿ ಕೇಂದ್ರಗಳಿಗೆ ಖರ್ಚಾಗಿದೆ?

ಶ್ರೀ ಜಿ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) 17 ಪ್ರಮುಖ ಪ್ರವಾಸಿ ಕೇಂದ್ರಗಳನ್ನು ಗುರುತಿಸಲಾಗಿದೆ.

ಆ) ರಾಜ್ಯದ ಪ್ರವಾಸೋದ್ಯಮ ನೀತಿಯ ಪ್ರಕಾರ ಪ್ರವಾಸೋದ್ಯಮ ಯೋಜನೆಗಳನ್ನು ಕೈಗೆತ್ತಿಕೊಳ್ಳುವಂತೆ ರಾಜ್ಯ ಸರ್ಕಾರವು ಖಾಸಗಿ ಉದ್ದಿಮಿಗಳನ್ನು ಉತ್ತೇಜಿಸುತ್ತದೆ.

ಉದಾಗ್ಯೂ, ಈ ಕೆಳಕಂಡ ಪ್ರವಾಸೋದ್ಯಮ ಯೋಜನೆಗಳನ್ನು ರಾಜ್ಯ ಸರ್ಕಾರವು ಕೇಂದ್ರದ ಆರ್ಥಿಕ ನೆರವಿನಿಂದ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೈಗೊಂಡಿದೆ.

1) ಚಿಕ್ಕಮಗಳೂರಿನಲ್ಲಿ ಹೆದ್ದಾರಿ ಸೌಲಭ್ಯದ ನಿರ್ಮಾಣ

2) ಶೃಂಗೇರಿಯಲ್ಲಿ ಯಾತ್ರಿ ನಿವಾಸ ನಿರ್ಮಾಣ